


## ಸೆರಾಮಿಕ್ ಕಾರ್ಬೈಡ್

ಸೆರಾಮಿಕ್ ಆಭರಣಗಳು ಆಭರಣ ಕ್ಷೇತ್ರದಲ್ಲಿ ಹೊಸದು. ಇದು ಶಾಖ ನಿರೋಧಕ, ಹಗುರ. ಚೆನ್ನಾಗಿ ಬಾಳಿಕೆ ಬರುತ್ತದೆ. ಅಗ್ಗದ ಆಭರಣವೂ ಹೌದು. ಕಪ್ಪು, ಬಿಳಿ, ಗುಲಾಬಿ ವಿವಿಧ ಬಣ್ಣಗಳಲ್ಲಿ ಲಭ್ಯ. ಇದನ್ನು ಧರಿಸಿದರೆ ಅಲರ್ಜಿ ಆಗುವುದಿಲ್ಲ. ಬಣ್ಣ ಮಾಸುವುದಿಲ್ಲ. ದೀರ್ಘಕಾಲ ಬಳಸಬಹುದು. ಇದೇ ರೀತಿ ಕೋಬಾಲ್ಟ್, ಪಲ್ಲಾಡಿಯಮ್ ಆಭರಣಗಳೂ ವೈವಿಧ್ಯಮಯ ವಿನ್ಯಾಸಗಳಲ್ಲಿ ಲಭ್ಯ. ಧರಿಸಲು ಆರಾಮದಾಯಕ, ನೋಡಲು ಅಂದ, ಆಕರ್ಷಕವಿದ್ದರೆ ಚಿನ್ನದ ಆಭರಣವೇ ಆಗಬೇಕೆಂದಿಲ್ಲ. ಇತರೆ ಲೋಹದ ಆಭರಣವೂ ಹೆಣ್ಣಿನ ನೋಟವನ್ನು ಸುಂದರವಾಗಿಸುತ್ತದೆ. ಹಾಗಿದ್ದರೆ ಚಿನ್ನದ ಆಸೆ ಬಿಟ್ಟು ಪರ್ಯಾಯ ಆಭರಣಗಳತ್ತ ಚಿತ್ತ ಹರಿಸಿ.

ಲವ್‌ಬ್ಯಾಂಡ್, ಮದುವೆ ನಿಶ್ಚಿತಾರ್ಥಕ್ಕೆ ಉಂಗುರಗಳು, ಪ್ರೀತಿಪಾತ್ರರಿಗೆ ಉಡುಗೊರೆ ಕೊಡಲು ಬ್ರೇಸ್ಲೆಟ್, ಪಾರ್ಟಿವೇರ್‌ಗೆ ಸಿಂಪಲ್ ಡಿಸೈನ್ ಸರ ಮತ್ತು ನೆಕ್ಲೇಸ್‌ಗಳು... ಇವೆಲ್ಲ ಇಂದಿನ ಹೊಸ ಟ್ರೆಂಡ್. ಈ ಆಭರಣ ದಿನನಿತ್ಯ ಬಳಕೆಗೂ ಯೋಗ್ಯವಾಗಿರುವುದರಿಂದ ಕಾಲೇಜು ಯುವತಿಯರು, ಕಚೇರಿಗಳಿಗೆ ಹೋಗುವ ಉದ್ಯೋಗಸ್ಥ ಮಹಿಳೆಯರು ಹೆಚ್ಚು ಇಷ್ಟಪಡುತ್ತಿದ್ದಾರೆ.

ಬೆಂಗಳೂರಿನಲ್ಲಿ ಆಭರಣ ಮಳಿಗೆಗಳಾದ ಕೃಷ್ಣಯ್ಯ ಚೆಟ್ಟಿ ಜ್ಯುವೆಲ್ಲರ್ಸ್, ಕೃಷ್ಣ ಡೈಮಂಡ್ ಜ್ಯುವೆಲ್ಲರಿ, ನಿಖಾರ್ ಜ್ಯುವೆಲ್ಲರಿ, ಆಭರಣ ಜ್ಯುವೆಲ್ಲರಿ, ಜೋಯಾಲುಕ್ಕಾಸ್, ಮಲಬಾರ್ ಗೋಲ್ಡ್, ಓರ್ರಾ ಆಭರಣ ಮಳಿಗೆಗಳಲ್ಲಿ ಪ್ಲಾಟಿನಂನ ವೈವಿಧ್ಯಮಯ ಆಭರಣ ಸಿಗುತ್ತದೆ.

### ಆಕ್ಸಿಡೈಸ್ಡ್ ಆಭರಣ

ಚಿನ್ನಕ್ಕೆ ಅತ್ಯಂತ ಸನಿಹವಾದ, ಚಿನ್ನದಷ್ಟೇ ಹೊಳಪನ್ನು ಕೊಡುವ ಆಭರಣ ಇದು. ಈಗೀಗ ಬಹಳ ಜನಪ್ರಿಯವಾಗುತ್ತಿದೆ. ಕೈಗೆಟಕುವ ಬೆಲೆಯಲ್ಲೂ ಸಿಗುತ್ತಿದೆ. ಆಕ್ಸಿಡೈಸ್ಡ್ ಒಡವೆ ನಿತ್ಯವೂ ಬಳಸಬಹುದು. ಇದರಲ್ಲಿ ಬ್ರೇಸ್ಲೆಟ್, ತೆಳ್ಳಗಿನ ಸರ, ಹಗುರವಾದ ಬಳೆ, ಉಂಗುರ, ನೆಕ್ಲೇಸ್, ಕಿವಿಯೋಲೆ ಎಲ್ಲವೂ ಲಭ್ಯ. ಚಿನ್ನದ ಬೆಲೆ ಗಗನಕ್ಕೇರಿದ ಮೇಲೆ ಇಂಥ ಆಭರಣ ರಸ್ತೆ ಬದಿಗಳಲ್ಲಿ ಬಸ್, ಮೆಟ್ರೊ ನಿಲ್ದಾಣಗಳಲ್ಲಿ ಭಾರೀ ವಹಿವಾಟು ನಡೆಯುತ್ತಿದೆ. ಕಾಲೇಜು ಹುಡುಗಿಯರಿಗೆ, ಕಚೇರಿಗಳಿಗೆ ತೆರಳುವವರಿಗೆ ಇಂಥ ಆಭರಣ ಹಗುರ ಹಾಗೂ ಆರಾಮದಾಯಕ.

‘ಆಕ್ಸಿಡೈಸ್ಡ್ ಆಭರಣ ಬಣ್ಣ ಮಾಸುವುದಿಲ್ಲ, ಅಂದಗೆಡುವುದಿಲ್ಲ, ಸುಲಭವಾಗಿ ಧರಿಸಬಹುದು, ಬೇಡವೆಂದಾಗ ತೆಗೆದಿಡಬಹುದು, ಒಂದು ವರ್ಷ ವಾರಂಟಿ ಇರುತ್ತದೆ. ಹೀಗಾಗಿ ಈಗೀಗ ಈ ಒಡವೆ ಚೆನ್ನಾಗಿ ಸೇಲ್ ಆಗುತ್ತಿದೆ’ ಎಂದು ಹೇಳುತ್ತಾರೆ ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಆಕ್ಸಿಡೈಸ್ಡ್ ಹಾಗೂ ಇಮಿಟೇಷನ್ ಒಡವೆ ವರ್ತಕ ದಿನಕರ ಶೆಟ್ಟಿ.

‘ಮೊದಲು ಬೀದಿ ಬದಿಯಲ್ಲೇ ವ್ಯಾಪಾರ ಮಾಡುತ್ತಿದ್ದೆ. ದಾರಿಹೋಕ ಮಹಿಳೆಯರೇ ಹೆಚ್ಚು ಖರೀದಿಸುತ್ತಿದ್ದರು. ಈಗ ಸಣ್ಣ ಅಂಗಡಿ ಇಟ್ಟುಕೊಂಡಿದ್ದೇನೆ. ಎಲ್ಲ ರೀತಿಯ ಒಡವೆಗಳೂ ಮಾರಾಟವಾಗುತ್ತಿವೆ. ವಹಿವಾಟು ಚೆನ್ನಾಗಿ ನಡೆಸುತ್ತಿದ್ದೇನೆ. ಕುಟುಂಬ ನಿರ್ವಹಣೆ ಚೆನ್ನಾಗಿಯೇ ಮಾಡುತ್ತಿದ್ದೇನೆ. ಕೃತಕ ಒಡವೆ ವ್ಯಾಪಾರ ಕೈಹಿಡಿದಿದೆ’ ಎಂದು ತನ್ನ ವಹಿವಾಟಿನ ವಿವರ ನೀಡುತ್ತಾರೆ ಅವರು.



### ಹಗುರ ಲೋಹ ಟೈಟಾನಿಯಂ

ಟೈಟಾನಿಯಂ ಅತ್ಯಂತ ಹಗುರವಾದ ನೈಸರ್ಗಿಕ ಲೋಹ. ಆಭರಣಗಳಲ್ಲಿ ಇದು ತುಂಬಾ ಚೆನ್ನಾಗಿರುತ್ತದೆ, ಬಾಳಿಕೆ ಬರುತ್ತದೆ. ನೋಟದಲ್ಲಿ ಬೆಳ್ಳಿಯನ್ನೇ ಹೋಲುತ್ತದೆ. ಅಲರ್ಜಿ ಉಂಟು ಮಾಡುವ ಸಾಧ್ಯತೆ ಕಡಿಮೆ. ಸಾಮಾನ್ಯವಾಗಿ ಪುರುಷರ ಆಭರಣಕ್ಕೆ ಸೂಕ್ತ ಎನ್ನುವುದು ವರ್ತಕರ ಅಭಿಪ್ರಾಯ. ಮಹಿಳೆಯರ ಉಂಗುರ, ಸರ, ಕಿವಿಯೋಲೆಗಳೂ ಲಭ್ಯ. ಜರ್ಮನ್ ಸಿಲ್ವರ್‌ನಂತೆ ಹೊಳಪೂ ಇರುತ್ತದೆ.